

"ಅಫ್ಸಾ ಮತ್ತು ಬೌಬೌ"



ಒಂದಾನೊಂದು ಕಾಲದಲ್ಲಿ, ಒಂದು ಪುಟ್ಟ ಹುಡುಗಿ ಅಫ್ಸಾ ಅವಳ ತಂದೆ, ತಾಯಿಯ ಜೊತೆ ಸಂತಸದಿಂದ ಇದ್ದಳು.



ಅವಳ ತಂದೆ ತಾಯಿ ಅವಳಿಗೆ ಅವರ ಅಜ್ಜಿ ತಾತನ ಮನೆಯಲ್ಲಿ ಇದ್ದ, ನಾಯಿ, ಬೆಕ್ಕು, ಕೋಳಿ, ಹಸು, ಮೇಕೆ ಹಾಗೂ ಒಂದು ಮಾತನಾಡುವ ಗಿಣಿಯ ಬಗ್ಗೆ ಹಲವಾರು ಕಥೆಗಳನ್ನು ಹೇಳಿದ್ದರು. ಆದರೆ ಇವೆಲ್ಲಾ ಹಿಂದಿನ ದಿನಗಳಲ್ಲಿ ಇದ್ದ ವಿಷಯ. ಅಪ್ಸ ಯಾವಾಗಲೂ ಒಂದು ಪ್ರಾಣಿಯನ್ನು ಸಾಕಬೇಕು ಎಂದುಕೊಳ್ಳುತ್ತಿದ್ದಳು.



ಒಂದು ದಿನ ಒಂದು ಪುಟ್ಟ ನಾಯಿ ಮರಿ, ಅವರ ಮನೆಗೆ ಬಂದಿತು. ಅಫ್ಸ ಯಾವಾಗಲು ನಾಯಿಗಳನ್ನು ದೂರದಿಂದಲೇ ನೋಡಿ ಇಷ್ಟ ಪಡುತ್ತಿದ್ದಳು. ಆದರೆ ಅವುಗಳನ್ನು ಮುದ್ದು ಮಾಡಲು ಭಯಪಡುತ್ತಿದ್ದಳು. ಆದರೆ ಈಗ ಬಂದಿದ್ದ ನಾಯಿಮರಿಯು ತುಂಬಾ ಚಿಕ್ಕದಿತ್ತು. ಕಂದು ಬಣ್ಣದ ಕಣ್ಣು ಹೊಂದಿತ್ತು ಹಾಗೂ ಗುಂಡಗೆ, ಉದ್ದನೆಯ ಕಿವಿ ಹಾಗೂ ಬಾಲದೊಂದಿಗೆ ಮುದ್ದು ಮುದ್ದಾಗಿತ್ತು.




ಅದನ್ನು ನೋಡಿದ ತಕ್ಷಣ ಅಫ್ಸ ತುಂಬ ಖುಷಿಯಾದಳು ಮತ್ತು ಉತ್ಸುಕಳಾದಳು. ಈ ಬಾರಿ ಅವಳಿಗೆ ಯಾವುದೇ ಭಯ ಇರಲಿಲ್ಲ. ನಾಯಿಮರಿಯು ಅಫ್ಸಾಳ ಕಣ್ಣಲ್ಲಿ ಪ್ರೀತಿಯಿಂದ ನೋಡಿ, ತನ್ನ ಸೂಕ್ಷ್ಮವಾದ ಪಾದಗಳನ್ನು ಅಫ್ಸಾಳ ಕಾಲುಗಳ ಮೇಲೆ ಇಟ್ಟ ತಕ್ಷಣ, ಅವಳಿಗೆ ತುಂಬಾ ಸಂತೋಷವಾಯಿತು.



ಅವಳು ಅದನ್ನು ಸಾಕಲು ತನ್ನ ತಂದೆ–ತಾಯಿ ಹತ್ತಿರ ಪರಿಪರಿಯಾಗಿ ಬೇಡಿಕೊಂಡಳು. ನಾಯಿಮರಿಯ ಮೇಲೆ ಅವಳ ಪ್ರೀತಿಯನ್ನು ಕಂಡು ಅವಳ ಪಾಲಕರು ಅದನ್ನು ಜೊತೆಗೆ ಇಟ್ಟುಕೊಳ್ಳಲು ಒಪ್ಪಿಗೆ ಕೊಟ್ಟರು. ಅಫ್ಸಾ ಆ ನಾಯಿ ಮರಿಗೆ ಬೌಬೌ ಎಂದು ಹೆಸರಿಟ್ಟಳು.





“ಆದರೆ ಅದು ಆರೋಗ್ಯವಾಗಿರಬೇಕು ಎಂದರೆ ನಾವು ಅದಕ್ಕೆ ಎಲ್ಲ ರೋಗಗಳ ವಿರುದ್ಧ ಚುಚ್ಚು ಮದ್ದನ್ನು ಕೊಡಿಸಬೇಕು”ಎಂದು ಅಫ್ಸಾಳ ತಾಯಿ ಹೇಳಿದರು. ಅದಕ್ಕೆ ಮಾರನೆಯ ದಿನ ಅವರು ಪ್ರಾಣಿ/ಪಶು ವೈದ್ಯರ ಬಳಿ ಕರೆದುಕೊಂಡು ಹೋಗಿ ಬೇಕಾದ ಎಲ್ಲ ಚುಚ್ಚು ಮದ್ದನ್ನು ಕೊಡಿಸಿದರು.



ಅಫ್ಸಾ ಅದನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಅದಕ್ಕೆ ದಿನಾಲೂ ಬೆಳಿಗ್ಗೆ ಹಾಲು ಮತ್ತು ಬ್ರೆಡ್‌ನ್ನು ಕೊಡುತ್ತಿದ್ದಳು. ಅದು ಅವಳು ಊಟ ಮಾಡುವಾಗೆಲ್ಲ ತನಗೂ ಮಾಂಸದ ಚೂರು/ಮೂಳೆ ಸಿಗಬಹುದೆಂದು ಅವಳ ಊಟದ ಟೇಬಲ್ ಕೆಳಗೆ ಕುಳಿತಿರುತ್ತಿತ್ತು.




ಅಫ್ಸಾ ಮತ್ತು ಅವಳ ತಂದೆ ಪ್ರೀತಿಯಿಂದ ನಾಯಿಮರಿಗೆ ಒಂದು ಕೆಂಪು ಬಣ್ಣದ ಕತ್ತಿನ ಪಟ್ಟಿಯನ್ನು ತಂದರು ಹಾಗೂ ಬೌಬೌ ಅದನ್ನು ತುಂಬಾ ಹೆಮ್ಮೆ ಮತ್ತು ಖುಷಿಯಿಂದ ಹಾಕಿಸಿಕೊಂಡಿತು.



ಬೌಬೌ ಕೂಡಾ ಅಫ್ಸಾಳನ್ನು ಆರಾಧಿಸುತ್ತಿತ್ತು (ಪ್ರೀತಿಸುತ್ತಿತ್ತು). ದಿನಾಲೂ ಮಧ್ಯಾಹ್ನ ಅಫ್ಸಾ ಶಾಲೆಯಿಂದ ಬರುವ ಸಮಯಕ್ಕೆ ಬಾಗಿಲ ಹತ್ತಿರ ನಿಂತುಕೊಂಡು, ಪ್ರೀತಿಯಿಂದ ನೆಕ್ಕುವುದು ಹಾಗೂ ಬೊಗಳುವುದರೊಂದಿಗೆ, ಅವಳನ್ನು ಬರಮಾಡಿಕೊಳ್ಳುತ್ತಿತ್ತು. ಅಫ್ಸಾ ಕೂಡ ಬೌಬೌ ಜೊತೆಗೆ ಮಾತನಾಡುತ್ತಿದ್ದಳು ಹಾಗೂ ಅದಕ್ಕೆ ಕಥೆಗಳನ್ನು ಓದಿ ಹೇಳುತ್ತಿದ್ದಳು.



ಸಂಜೆ ಅದು ಅವಳ ಜೊತೆ ಬೇರೆ ಮಕ್ಕಳ ಜೊತೆ ಆಡವಾಡಲು ಹೊರಗೆ ಹೋಯಿತು. ರಾತ್ರಿ ಅವಳ ಕಾಲಿನ ಹತ್ತಿರ ಬೆಚ್ಚಗೆ ಮಲಗಿತು. ಅವನು ಅಫ್ಸಾಳ ಪ್ರಾಮಾಣಿಕ ಸ್ನೇಹಿ ತನಾಗಿದ್ದ ಹಾಗೂ ಯಾವತ್ತೂ ಅವಳನ್ನು ಬಿಟ್ಟು ಹೋಗುತ್ತಿರಲಿಲ್ಲ.



ಅಫ್ಸಾ ಅವನಿಗೆ ದಿನಾಲೂ ಅವಳ ಅಪ್ಪನಿಗೆ ನ್ಯೂಸ್ ಪೇಪರ್ ತಂದುಕೊಡಲು ಕಲಿಸಿಕೊಟ್ಟಿದ್ದಳು. ಅದು ತುಂಬಾ ಜಾಣ ನಾಯಿಮರಿಯಾಗಿತ್ತು. ಅವಳು ಅದಕ್ಕೆ ಸ್ನಾನ ಮಾಡಿಸುವುದನ್ನು ತುಂಬಾ ಇಷ್ಟಪಡುತ್ತಿದ್ದಳು ಹಾಗೂ ಅದು ಕೂಡಾ ನೀರಲ್ಲಿ ಆಡುವುದನ್ನು ಇಷ್ಟಪಡುತ್ತಿತ್ತು. ಹೀಗೆ ದಿನಾ ಕಳೆದಂತೆ ಅವರಿಬ್ಬರ ಸ್ನೇಹವೂ ತುಂಬಾ ಗಟ್ಟಿಯಾಗಿ ಬೆಳೆಯಿತು.



ಒಂದು ದಿನಾ ಅವರ ಊರಿಗೆ ಚಂಡಮಾರುತ ಬಂತು. ಅದರ ಜೊತೆಗೆ ತುಂಬಾ ಮಳೆ ಶುರುವಾಯಿತು. ನೋಡುತ್ತಿದ್ದಂತೆಯೇ ಮಳೆ ಜೋರಾಗಿ ಅಫ್ಸಾ ಮತ್ತು ಅಕ್ಕಪಕ್ಕದವರ ಮನೆಗಳನ್ನು, ಇಡೀ ಬೀದಿಯ ತುಂಬೆಲ್ಲಾ ನೀರು ತುಂಬಿಕೊಂಡಿತು.



ಜನರು ತುಂಬಾ ಹೆದರಿಕೊಂಡರು. ಭಯದಲ್ಲಿ ಜನರು ತಮ್ಮ ತಮ್ಮ ವಸ್ತುಗಳನ್ನು ಕಟ್ಟಿಕೊಂಡು ಆ ಸ್ಥಳದಿಂದ ಹೊರಡಲು ತಯಾರಾದರು. ಇದೇ ರೀತಿ ಅಫ್ಸಾಳ ತಂದೆ–ತಾಯಿ ಕೂಡ ಅವಸರದಲ್ಲಿ ತಮಗೆ ಬೇಕಾದಷ್ಟು (ಆದಷ್ಟು) ವಸ್ತುಗಳನ್ನು ಕಟ್ಟಿಕೊಂಡು ತಮ್ಮ ಮನೆಯಿಂದ ಹೊರಟರು. ಇಷ್ಟೆಲ್ಲಾ ಆಗುವಾಗ ಅಫ್ಸಾ ನಿದ್ದೆಯಲ್ಲಿದ್ದಳು, ಅವಳ ತಂದೆ ಅವಳನ್ನು ಎತ್ತಿಕೊಂಡು ಮನೆಯಿಂದ ಹೊರಟರು.




ಅವಳಿಗೆ ಎಚ್ಚರವಾದಾಗ ಅವರೆಲ್ಲಾ ಒಂದು ದೊಡ್ಡ ಕಟ್ಟಡದಲ್ಲಿದ್ದರು. ಇವರ ತರಹವೇ ಅಲ್ಲಿ ಬೇರೆ ಎಷ್ಟೋ ಜನ ತಮ್ಮ ಲಗ್ಗೇಜು ಹಾಗೂ ಬ್ಯಾಗುಗಳೊಂದಿಗೆ, ಭಯದಲ್ಲಿ, ಕಳೆದುಕೊಂಡಿರೋ ತರಹ ಕುಳಿತಿದ್ದರು. ಇಷ್ಟೆಲ್ಲಾ ನೋಡುತ್ತಿದ್ದಾಗ ಅಫ್ಸಾಗೆ ಬೌಬೌ ಕಾಣುತ್ತಿಲ್ಲವೆಂದು ಗೊತ್ತಾಯಿತು. ಅವಳು ಅಳುತ್ತಾ ಬೌಬೌ ತರಲು ಮತ್ತೆ ಮನೆಗೆ ಮರಳಿ ಹೋಗಬೇಕು ಎಂದು ಹಠ ಹಿಡಿದಳು.



ಆದರೆ ಮನೆಗೆ ಹೋಗುವುದು ಸುರಕ್ಷಿತವಲ್ಲ ಹಾಗೂ ಸಾಧ್ಯವೂ ಇಲ್ಲ ಎಂದು ಅಫ್ಸಾಳ ಪಾಲಕರು ಅವಳಿಗೆ ಹೇಳಿದರು. ಈವಾಗಿಂದ ಅವರು ಇದೇ ದೊಡ್ಡ ಕಟ್ಟಡದಲ್ಲೆ ಇರಬೇಕಾಗಿತ್ತು. ಆದರೆ ಅವರ್‍ಯಾರು ಅಫ್ಸಾಳಿಗೆ ಪರಿಚಯವಿರಲಿಲ್ಲ. ಇಂತಹ ಜನನಿಬಿಢ ಮತ್ತು ತುಂಬಾ ಗಲಾಟೆ ಇರುವ ಜಾಗದಲ್ಲಿ ಅಪರಿಚಿತ ಸ್ಥಳದಲ್ಲಿ ಇರಲು ಅವಳಿಗೆ ತುಂಬಾ ಭಯವೆನಿಸಿತು. ತನ್ನ ಸುತ್ತ ಇರುವ ಎಲ್ಲ ಅಪರಿಚಿತ ವ್ಯಕ್ತಿಗಳನ್ನು ನೋಡಿ ಅವಳಿಗೆ ಭಯ ಎನಿಸಿತು.



ಕೆಲವು ವಾರಗಳ ನಂತರ ಅಫ್ಸಾ ಮತ್ತು ಅವಳ ಪಾಲಕರಿಗೆ ಬೇರೊಂದು ಹೊಸ ಮನೆಗೆ ಹೋದರು. ಆ ಗಿಜಿಗಿಡುತ್ತಿದ್ದ ದೊಡ್ಡ ಕಟ್ಟಡಕ್ಕಿಂತ ಈಗಿರುವ ಮನೆ ಚೆನ್ನಾಗಿತ್ತು. ಇಷ್ಟು ದಿನವಾದರೂ ಅಫ್ಸಾ ಇನ್ನೂ ದುಃಖಿತವಾಗಿದ್ದಳು. ಅವಳು ಬೌಬೌ ನ್ನು ನೆನೆಸಿಕೊಂಡು ಯಾವಾಗಲೂ ಅಳುತ್ತಾ ತುಂಬಾ ದುಃಖದಿಂದ ಇರುತ್ತಿದ್ದಳು. ಅದಕ್ಕೆ ಏನಾಯಿತು? ಎಲ್ಲಿಗೆ ಹೋಯಿತು? ಅದು ಸುರಕ್ಷಿತವಾಗಿದೆಯೇ? ಎಂಬ ಪ್ರಶ್ನೆಗಳು ಕಾಡುತ್ತಿದ್ದವು. ಅವಳು ತನ್ನ ಆತ್ಮೀಯ ಸ್ನೇಹಿತನ ನೆನಪಿನಲ್ಲಿರುತ್ತಿದ್ದಳು.



‘ಮೊದಲು ಬಂದ ಹಾಗೆಯೇ, ಈ ಸಾರಿಯೂ ದಾರಿ ತಪ್ಪಿ ಮತ್ತೇ ಮನೆಗೆ ಬರಬಹುದು’ ಎಂಬ ಆಲೊಚನೆ ಮತ್ತು ಆಸೆಯಿಂದ ಅವಳು ಯಾವಾಗಲೂ ಕಿಟಕಿಯಿಂದ ಆಚೆಗೆ ನೋಡುತ್ತಿರುತ್ತಿದ್ದಳು. ಅವಳ ಪಾಲಕರು ಅವಳನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು. ನಾವು ‘ಬೇರೊಂದು ನಾಯಿ ಮರಿಯನ್ನು ತರೋಣ’ ಎಂದರು. ಆದರೆ ಅಫ್ಸಾ ಅದಕ್ಕೆ ಒಪ್ಪಲಿಲ್ಲ. “ಧನ್ಯವಾದ ಆದರೆ ಬೇರೆ ನಾಯಿಮರಿಯನ್ನು ತಂದು ಸಾಕಿದರೂ ಅದು ಬೌಬೌ ಆಗಲ್ಲ” ಎಂದು ಹೇಳಿದಳು.



ಅವಳು ತನ್ನ ಪಾಲಕರನ್ನು ಬಿಟ್ಟು, ಬೇರೆಯವರ ಜೊತೆ ಶಾಲೆಗೆ ಹೋಗಲು ಒಪ್ಪಲಿಲ್ಲ. ಅವಳ ಪಾಲಕರು ಎಷ್ಟೇ ಸಂತೈಸಿದರೂ, ಪರಿಪರಿಯಾಗಿ ಹೇಳಿದರೂ ಅವಳಿಗೆ ಸಮಾಧಾನವಾಗಲಿಲ್ಲ ಹಾಗೂ ಬೇರೆಯವರ ಜೊತೆ ಬೆರೆಯಲು/ಆಡಲೂ ಹೋಗುತ್ತಿರಲಿಲ್ಲ.

"ಬೌಬೌ ಕಳೆದು ಹೋದನಾ ಅಥವಾ ಬೇರೆ ಎಲ್ಲಾದರೂ ಹೋದನಾ" ಎಂದು ಅಫ್ಸಾ ತನ್ನ ತಂದೆತಾಯಿಯನ್ನು ಕೇಳುತ್ತಿದ್ದಳು, ಜೊತೆಗೆ ತುಂಬಾ ಭಯದಲ್ಲೇ "ಬೌಬೌ ತರ ನೀವೂ ನನ್ನ ಬಿಟ್ಟು ದೂರ ಹೋಗುತ್ತೀರಾ ಆವಾಗ ನಂಗೆ ಏನಾಗುತ್ತೆ? ಒಬ್ಬಳೇ ಏನು ಮಾಡಲಿ" ಎಂದು ಕೇಳುತ್ತಿದ್ದಳು. ಇದನ್ನೆಲ್ಲಾ ಯೋಚಿಸಿದ ಮೇಲೆ ಅವಳಿಗೆ ಇನ್ನೂ ಭಯವಾಯಿತು. ಅದರಿಂದ ಇನ್ನೂ ಕಿರಿಕಿರಿ ಮಾಡತೊಡಗಿದಳು ಮತ್ತು ಅಳುತ್ತಿದ್ದಳು. ಇದನ್ನೆಲ್ಲ ನೋಡಿದ ಮೇಲೆ ಅಫ್ಸಾಳ ಮನಸ್ಥಿತಿ/ಪರಿಸ್ಥಿತಿ ಅವಳ ಪಾಲಕರಿಗೆ ಅರ್ಥವಾಯಿತು.



“ನೋಡು ನಾನು ನಿನ್ನ ಪಕ್ಕದಲ್ಲಿ ಇದ್ದೀನಿ, ನಾನಾಗಲಿ ನಿನ್ನ ಅಪ್ಪನಾಗಲಿ ನಿನ್ನ ಬಿಟ್ಟು ಎಲ್ಲೂ ಹೋಗಲ್ಲಾ ನಿನಗೆ ಎಷ್ಟು ದುಃಖವಾಗಿದೆ ಎಂದು ನಮಗೆ ಗೊತ್ತು, ನಿನ್ನ ತರ ನಾವು ಕೂಡ ಬೌಬೌ ಇಲ್ಲ ಎಂದು ಯೋಚಿಸಿದಾಗ ಬೇಜಾರಾಗುತ್ತೆ” ಎಂದು ಅವಳ ತಾಯಿ ಹೇಳಿದಳು. “ಪ್ರವಾಹ ಬಂದಿದ್ದರಿಂದ ಅವಸರದಲ್ಲಿ ನಾವು ಮನೆ ಬಿಡಬೇಕಾಗಿ ಬಂತು, ಆ ಸಮಯದಲ್ಲಿ ನಮಗೆ ಬೌಬೌ ಎಲ್ಲೂ ಸಿಗಲಿಲ್ಲ. ನಾವು ಸುರಕ್ಷಿತವಾಗಿ ಬಂದಿರೊ ತರಹವೇ ಬೌ ಬೌ ಕೂಡ ಬೇರೆ ಎಲ್ಲಾದರೂ/ಯಾರ ಜೊತೆಗಾದ್ರೂ ಸುರಕ್ಷಿತವಾಗಿ ಹೋಗಿರುತ್ತದೆ/ಇರುತ್ತದೆ” ಎಂದು ತಂದೆ ಹೇಳಿದರು. ಅಫ್ಸಾಳನ್ನು ಕರೆದು ತಬ್ಬಿಕೊಂಡು “ನಾನು ಮತ್ತು ನಿಮ್ಮ ತಾಯಿ ನಿನ್ನ ಬಿಟ್ಟು ಎಲ್ಲೂ ಹೋಗಲ್ಲ, ಹೆದರಬೇಡ” ಎಂದು ಸಂತೈಸಿದರು.







ಹೀಗೆ ದಿನ ಕಳೆದಂತೆ, ಅಫ್ಸಾ ನಿಧಾನವಾಗಿ ಸರಿ ಹೋಗುತ್ತಿದ್ದಳು. ಅವಳ ತಂದೆ ಮತ್ತು ತಾಯಿ ಕ್ಯಾರಮ್ ಆಡುತ್ತಾ, ಕಥೆಗಳನ್ನು ಹೇಳುತ್ತಾ ಅವಳ ಜೊತೆ ಹೆಚ್ಚಿನ ಸಮಯ ಕಳೆಯುತ್ತಾ ಅವಳಿಗೆ ಸುರಕ್ಷಿತ ಭಾವನೆ ಬರುವಂತೆ ನೋಡಿಕೊಂಡರು. ಅವಳ ಅಮ್ಮ ಅಫ್ಸಾಗೆ ಕಥೆಗಳನ್ನು ಓದಿ ಹೇಳುತ್ತಿದ್ದರು ಮತ್ತು ಅವರ ತಂದೆ ಅವಳ ಇಷ್ಟದ ಊಟ/ಅಡುಗೆ ಮಾಡಿ ತಿನ್ನಿಸುತ್ತಿದ್ದರು.




ಅಫ್ನಾಳ ತಾಯಿ ಅವಳನ್ನು ತಮ್ಮ ಮನೆಯ ಅಕ್ಕಪಕ್ಕದಲ್ಲಿದ್ದ ಅಂಗಡಿಗೆ ಕರೆದುಕೊಂಡು ಹೋದರು. ಅವರು ಅಫ್ನಾಳಿಗೆ ಬಲೂನ್ ಕೊಡಿಸಿದರು. ಅಫ್ನಾಳಿಗೆ ತುಂಬಾ ಖುಷಿಯಾಯಿತು.



ಒಂದು ದಿನ ಅವಳ ತಾಯಿ, ಅಫ್ಸಾ ಮತ್ತು ಬೌಬೌ ಇದ್ದ ಫೋಟೋ ತೋರಿಸಿದರು ಅದನ್ನು ನೋಡಿ ಅಫ್ಸಾ ಮತ್ತೆ ಅಳಲು ಶುರು ಮಾಡಿದಳು.



“ಬೌಬೌ ಇಲ್ಲದೇ ನಿನಗೆ ಎಷ್ಟು ನೋವಾಗಿದೆ ಎಂದು ನಮಗೆ ಗೊತ್ತು, ನಿಮ್ಮ ತಂದೆ ಹೇಳಿದಂತೆ ಅದನ್ನು ಬೇರೆ ಯಾರಾದರೂ ಕಾಪಾಡಿರುತ್ತಾರೆ. ಅದಕ್ಕೆ ಬೇರೆ ಮನೆ ಸಿಕ್ಕಿರಬೇಕು, ಅದು ಚೆನ್ನಾಗಿರುತ್ತದೆ. ಬೇರೆ ಯಾವುದಾದರೂ ಕುಟುಂಬಕ್ಕೆ ಅದು ಸಿಕ್ಕಿರಬೇಕು ಮತ್ತು ಅವರು ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ” ಎಂದು ಅಫ್ಸಾಳ ತಾಯಿ ಅವಳನ್ನು ಸಮಾಧಾನಪಡಿಸಿದರು. “ನನ್ನಷ್ಟೇ ಪ್ರೀತಿ ಮಾಡುವಷ್ಟು ಒಳ್ಳೇ ವ್ಯಕ್ತಿ ಮತ್ತು ಕುಟುಂಬ ಸಿಕ್ಕಿರಲಿ ಎಂದು ಆಶಿಸುತ್ತೇನೆ” ಎಂದು ಅಫ್ಸಾ ಹೇಳಿದಳು.







ಸಮಯ ಕಳೆದಂತೆ ಅಫ್ಸಾ ಮನಸ್ಸು ಸರಿಹೋಯಿತು. ತನ್ನ ಪಾಲಕರನ್ನು ಕಳೆದುಕೊಳ್ಳುವ ಭಯದಿಂದ ಹೊರಬಂದಳು. ಬೇರೆ ಹೊಸ ಮಕ್ಕಳೊಂದಿಗೆ ಸ್ನೇಹ ಬೆಳೆಸಿಕೊಂಡು, ಅವರೊಡನೆ ಆಡತೊಡಗಿದಳು. ಹಾಗೆಯೇ ಶಾಲೆಗೂ ಹೋಗ ತೊಡಗಿದಳು. ತಮ್ಮ ತಾಯಿ ಮನೆಯಲ್ಲೇ ಇರುತ್ತಾರೆ. ತನ್ನನ್ನು ಬಿಟ್ಟು ಹೋಗುವುದಿಲ್ಲ ಎಂದು ಯೋಚಿಸಿದಾಗ ಅವಳಿಗೆ ಸಮಾಧಾನ ಹಾಗೂ ಸುರಕ್ಷಿತವೆನಿಸಿತು. ಅವಳ ತಂದೆ ದಿನಾಲೂ ಸಂಜೆ ಬಂದು ತನ್ನ ಜೊತೆ ಆಟವಾಡುತ್ತಾರೆ ಮತ್ತು ಹಾಡಿ ಮಲಗಿಸುತ್ತಾರೆ ಎಂದು ಯೋಚಿಸಿ ಖುಷಿಪಟ್ಟಳು.



ಆದರೂ ಅವಳು ಬೌಬೌನ್ನು ತುಂಬ ನೆನೆಯುತ್ತಿದ್ದಳು. ಎಲ್ಲೋ ಒಂದು ಕಡೆ ಅವನು ಚೆನ್ನಾಗಿದ್ದಾನೆ ಎಂದು ಆಶಿಸುತ್ತಿದ್ದಳು. ಅವರಿಬ್ಬರ ಫೋಟೋ ನೋಡಿ ಅವರು ಕಳೆದ ಸಂತೋಷದ ದಿನಗಳನ್ನು ನೆನೆಸಿಕೊಂಡು, ಅದು ಕೂಡಾ ಒಂದು ಒಳ್ಳೆ ಕುಟುಂಬದ ಜೊತೆ ಚೆನ್ನಾಗಿರುತ್ತದೆ ಎಂದು ನೆನೆದು ಖುಷಿಪಟ್ಟಳು.



ಒಂದು ದಿನ ವಿಚಿತ್ರ ನಡೆಯಿತು. “ಬೌಬೌ ತರಹದ ಇನ್ನೊಂದು ನಾಯಿ ಮರಿ ಅಫ್ಸಾಳ ಮನೆಗೆ ಬಂತು, ಅಫ್ಸಾ “ಅಮ್ಮ ಅಲ್ಲಿ ನೋಡಿ ಅದು ಬೌಬೌ ತರಹವೇ ಇದೆ ನಾವು ಅದನ್ನು ಇಟ್ಟುಕೊಳ್ಳಬಹುದಲ್ವಾ” ಎಂದು ಕಾತರದಿಂದ ಕೇಳಿದಳು.



ಹೇಗೋ ಅಫ್ಸಾಳಿಗೆ ಹೊಸ ನಾಯಿಮರಿ ಸಿಕ್ತು. “ನಾವು ಬೌಬೌ ಸಾಕದಿದ್ದರೆ ನಮಗೆ ಪ್ರಾಣಿಯನ್ನು ಹೇಗೆ ಸಾಕಬೇಕೆಂದು ಗೊತ್ತಾಗುತ್ತಿರಲಿಲ್ಲ” ಎಂದು ಅಫ್ಸಾ ತನ್ನ ಪಾಲಕರಿಗೆ ಹೇಳಿದಳು. ನಾಯಿಯನ್ನು ಸಾಕುವುದು ಎಷ್ಟು ಒಳ್ಳೆಯದು ಎಂದು ನನಗೆ ಈಗ ಗೊತ್ತಾಗಿದೆ ಎಂದು ಹೇಳಿದಳು, ಮತ್ತೊಂದು ನಾಯಿ ಬಂದಿದೆ ನನಗೆ ತುಂಬಾ ಖುಷಿಯಾಯಿತು ಎಂದು ಹೇಳಿದಳು.

Community Child & Adolescent Mental Health Service Project,
Department of Child & Adolescent Psychiatry,
National Institute of Mental Health & Neruosciences (NIMHANS)
(Institute Of National Importance)
Hosur Road, Bengaluru - 560029

Website : www.nimhans.ac.in
Email : capnimhans@gmail.com

Supported by the Dept. of Women and Child Development, Govt. of Karnataka

Design and Art work : SathishRam